ಟೀಪೂ ಸುಲ್ತಾನನ ಪಡೆಯೊಡನೆ ಕಾದಾಡಲು ಕಳಿಸಿದ ಆ ರಾಜ ತಾನು ಮಾತ್ರ ಅರಮನೆಯ ನೆಲಮಾಳಿಗೆಯಲ್ಲಿ ಅಡಗಿಕೊಂಡ. ಯುದ್ಧಕ್ಕೆ ಹೊರಟಿದ್ದವರನ್ನು ಸೆರೆಹಿಡಿದ ಟೀಪೂವಿನ ಕಡೆಯವರು ಅವರನ್ನು ಶ್ರೀರಂಗಪಟ್ಟಣಕ್ಕೆ ಎಳೆದುಕೊಂಡು ಹೋಗಿ ಮುಸಲ್ಮಾನರನ್ನಾಗಿ ಮಾಡಿದ. ಬ್ರಿಟಿಷರು ಟೀಪುವನ್ನು ಮುಗಿಸಿದ ಮೇಲೆ ಅವರು ವಾಪಸು ಬಂದಾಗ ರಾಜ ಕೊಟ್ಟಿದ್ದ ಭೂಮಿ ಬೇರೆಯವರ ಪಾಲಾಗಿತ್ತು. ರಾಜ ಕೊಟ್ಟಿದ್ದ ಖಡ್ಗ ಮಾತ್ರ ಕೈಯಲ್ಲಿ ಉಳಿದಿತ್ತು. ಆ ಖಡ್ಗ ಮುತ್ತಜ್ಜನಿಂದ ಅಜ್ಜನಿಗೆ ಅಜ್ಜನಿಂದ ನನ್ನ ತಂದೆಗೆ ಬಂದಿತ್ತು. ನಾವು ಸಣ್ಣದಿರುವಾಗ ಅದು ಅಟ್ಟದಲ್ಲಿ ಒಣಗಿದ ತೆಂಗಿನ ಕಾಯಿಗಳ ನಡುವೆ ಮಲಗಿಕೊಂಡಿರುತ್ತಿತ್ತು. ಆಮೇಲೆ ನಮ್ಮ ತಂದೆಯವರು ಅದನ್ನು ತೂಕಕ್ಕೆ ಕಬ್ಬಿಣದವನಿಗೆ ಮಾರಿದ್ದರು. ಹಾಗೆ ಮಾರುತ್ತ ಮಾರುತ್ತ ನನ್ನನ್ನು ಓದಿಸಿದ್ದರು. ಅವರು ನನ್ನನ್ನು ಓದಲು ಕಳಿಸಿದ್ದರೆ ನಾನು ಬರೆಯಲು ಶುರುಮಾಡಿದ್ದೆ. ಕುಡಿತವೂ ಕ್ರಾಂತಿಯೂ ಪ್ರೇಮವೂ ಶುರುವಾಗಿತ್ತು. ಈಗ ಈ ವಯಸ್ಸುಗಾಲದಲ್ಲಿ ಖಿನ್ನತೆ.

'ಒಂದು ವೇಳೆ ನನ್ನ ಮುತ್ತಜ್ಜನ ಮುತ್ತಜ್ಜ ಆದದ್ದು ಆಗಲಿ ಎಂದು ಅಲ್ಲೇ ಉಳಕೊಂಡಿದ್ದರೆ, ಇಲ್ಲಿ ಮುಸಲ್ಮಾನನಾಗುವ ಬದಲು ಅಲ್ಲೇ ಆಗುತ್ತಿದ್ದ. ಇಷ್ಟೆಲ್ಲಾ ಕಷ್ಟ ಬೇಕಿತ್ತಾ. ಎಂತಹ ತಮಾಷೆಯಲ್ಲವಾ ಮನುಷ್ಯನ ಪಡಿಪಾಟಲುಗಳು' ಎಂದು ನಾನೂ ನಕ್ಕಿದ್ದೆ.

'ಲೋಕ ಕೊನೆಗೊಳ್ಳುವುದು ಅಣ್ವಸ್ತ್ರ, ಪ್ರವಾಹ, ಪ್ರಳಯ ಯಾವುದರಿಂದಲೂ ಅಲ್ಲ. ಇದೇ ತರಹ ಒಂದು ಮಹಾದೊಡ್ಡ ಹೇಸಿಗೆಯ ತಮಾಷೆಯ ವಾಸನೆಯಿಂದ' ಎಂದು ಅವರು ಅಂದಿದ್ದರು.

★★★

ಈಗ ನೋಡಿದರೆ ಈ ಕಥೆಯೂ ಒಂದು ದೊಡ್ಡ ಹೇಸಿಗೆಯ ವಾಸನೆಯಿಂದ ಮುಕ್ತಾಯವಾಗುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಚಾರುದತ್ತರು ತೀರಿ ಹೋಗಿ ನಾಳೆಗೆ ಸರಿಯಾಗಿ ಒಂದು ವರ್ಷವಾಗುತ್ತದೆ. ಅಂದರೆ, ಅವರ ಮೊದಲ ಪುಣ್ಯತಿಥಿ. ಅದಕ್ಕೆ ಸರಿಯಾಗಿ ಅವರಿಗೊಂದು ಗತಿಕಾಣಿಸಲು ವಿಲಾಸಿನಿ ಸಿದ್ಧಳಾಗುತ್ತಿದ್ದಾಳೆ. ನಾಳೆ ಭಾನುವಾರ ಮಡಿಕೇರಿಯ ಹಿಮದರ್ಶನದಲ್ಲಿ ಪುಸ್ತಕ ಬಿಡುಗಡೆ. ಕೊರೊನಾದ ನಿಮಿತ್ತ ನಿಬಂಧನೆಗಳಿರುವುದರಿಂದ ಬೇರೆ ಯಾರೂ ಇರುವುದಿಲ್ಲ. ಲೇಖಕಿಯಾದ ವಿಲಾಸಿನಿ ಮತ್ತು ಪ್ರಕಾಶಕಿಯಾದ ಸೌಭಾಗ್ಯ. ಸೌಭಾಗ್ಯ ಅಂದರೆ ನಿಮಗೆ ನೆನಪಿರಬೇಕು. ಚಾರುದತ್ತರ ಸೊಸೆ.

ವಿಲಾಸಿನಿ ಫೋನು ಮಾಡಿದ್ದಳು. ಗಂಡಾಡು ಗಿಂಡಾಡು ಅಂತ ಏನೂ ಸಂಬೋಧನೆ ಇಲ್ಲ. ನೇರವಾಗಿ ಬಹುವಚನದಲ್ಲೇ ವಿಷಯಕ್ಕೆ ಬಂದಳು.

'ತಾವು ದಯವಿಟ್ಟು ಒಂದು ಸಹಾಯ ಮಾಡಬಹುದಾ?'

'ಒಂದು ಸಹಾಯವೇನು, ನಿನಗಾಗಿ ನನ್ನ ಜೀವವನ್ನೇ ಕೊಡಬಲ್ಲೆ. ಹೇಳು, ನನ್ನ ಗುಂಡಿಗೆ ಬೇಕಾ? ಶಿರ ಬೇಕಾ? ಕರುಳು ಬೇಕಾ?'

'ಇದೆಲ್ಲ ತಮಾಷೆಗಳು ಬೇಡ. ಚಾರುದತ್ತರ ಕುರಿತ ನಿಮ್ಮ ನೇರ ಅನಿಸಿಕೆಗಳನ್ನ ಫೇಸುಬುಕ್ಕಿನಲ್ಲಿ ಹಂಚಿಕೊಂಡರೆ ನನ್ನ ಪುಸ್ತಕಕ್ಕೆ ಪೂರಕವಾಗಬಹುದು.'

'ಯಾವ ಪುಸ್ತಕ? ಅಟ್ಟ ಹತ್ತಿ ಕದ್ದ ಪುಸ್ತಕವಾ?'

'ಅದು ಕದ್ದದ್ದಲ್ಲ, ಪ್ರಕಾಶಕರೇ ಕೊಟ್ಟದ್ದು. ಸೌಭಾಗ್ಯನವರೇ ಕೊಟ್ಟದ್ದು ಹಸ್ತಪ್ರತಿ. ಅದು ಇಟ್ಟುಕೊಂಡು ನಾವು ಬರೆದದ್ದು. ಒಂದು ಮರು ವ್ಯಾಖ್ಯಾನ. ಬಹಳ ಬಹಳ ಸ್ಫೋಟಕ ವಿಷಯಗಳು ಇವೆ ಅದರಲ್ಲಿ. ಎಲ್ಲವೂ ಹೊರಗೆ ಬರಲಿವೆ.'

ವಿಲಾಸಿನಿ ಗಂಭೀರವಾಗಿ ಮಾತನಾಡುತ್ತಿದ್ದಳು.

'ಅದು ಸಂದುಹೋದ ಲೇಖಕರೊಬ್ಬರ ಕುರಿತ ಸ್ತ್ರೀವಾದೀ ವ್ಯಾಖ್ಯಾನ' ಒಂದು ವರ್ಷದಲ್ಲೇ